**ಒ.ಎಸ್.ನಂ. 333/2022**

**ಪಿ. ಡಬ್ಲೂ-1**

**ದಿನಾಂಕಃ 05.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ಪ್ರತಿವಾದಿಗಳ ಪರ ಶ್ರೀ ಎಂ.ಡಿ ವಕೀಲರಿಂದಃ-**

ನನ್ನ ಮುಖ್ಯ ಸಾಕ್ಷ್ಯ ಪ್ರಮಾಣವನ್ನು ನಾನೇ ಹೇಳಿ ಬರೆಸಿರುತ್ತೇನೆ. ಪ್ರತಿವಾದಿಗಳು ನನಗೆ ತೊಂದರೆ ಕೊಡುತ್ತಿದ್ದಾರೆ ಎಂದು ದಾವೆ ಹೂಡಿರುತ್ತೇನೆ. ಪ್ರತಿವಾದಿಗಳು ನಿಮ್ಮ ವ್ಯವಸಾಯಕ್ಕೆ ತೊಂದರೆ ಕೊಡುತ್ತಿದ್ದಾರಾ ಅಥವಾ ಒತ್ತುವರಿ ಮಾಡಿಕೊಂಡು ತೊಂದರೆ ಕೊಡುತ್ತಿದ್ದಾರಾ ಎಂದರೆ ವ್ಯವಸಾಯಕ್ಕೆ ತೊಂದರೆ ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ ಮುಂದುವರಿದು ಪ್ರತಿವಾದಿಗಳು 28 ಗುಂಟೆಯನ್ನು ಒತ್ತುವರಿ ಮಾಡಿಕೊಂಡು ತೊಂದರೆ ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ. 28 ಗುಂಟೆಯನ್ನು ಒತ್ತುವರಿ ಮಾಡಿರುತ್ತಾರೆ ಎಂದು ಅಳತೆ ಮಾಡಿಸಿರುತ್ತೇನೆ, ಅದರ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಜಮೀನು ಮತ್ತು ಪ್ರತಿವಾದಿಗಳ ಜಮೀನು ಅಕ್ಕ ಪಕ್ಕ ಇರುತ್ತದೆ ಎಂದರೆ ಸರಿ . ನನ್ನ ಜಮೀನು ಮತ್ತು ಪ್ರತಿವಾದಿಗಳ ಜಮೀನಿನ ನಡುವೆ ನೀರು ಹರಿಯುವ ಹಳ್ಳ ಇದೆ ಎಂದರೆ ಓಣಿ ಇದೆ ಎಂದು ನುಡಿ ಯುತ್ತಾರೆ.

ನಾನು ಸಾಗುವಳಿ ಪಡೆದಿರುವ ಜಮೀನಿನ ಸ.ನಂ.19 ರಲ್ಲಿ 2 ಎಕರೆ 20 ಗುಂಟೆ ಇರುತ್ತದೆ. ಸದರಿ ಜಮೀನಿನ ಚಕ್ಕುಬಂಧಿ ಪೂರ್ವಕ್ಕೆ ಚಿನ್ನೇಗೌಡ , ಪಶ್ಚಿಮಕ್ಕೆ ನಾಗಮ್ಮ, ಉತ್ತರಕ್ಕೆ ಸಣ್ಣತಾಯಮ್ಮ ಮತ್ತು ದಕ್ಷಿಣಕ್ಕೆ ಪುಟ್ಟೇಗೌಡರವರ ಜಮೀನು ಇರುತ್ತದೆ. ಸ.ನಂ. 19 ರಲ್ಲಿ 3 ಎಕರೆ ಜಮೀನು ನನ್ನ ಹೆಂಡತಿಯ ಹೆಸರಿನಲ್ಲಿರುತ್ತದೆ. ಸದರಿ 3 ಎಕರೆಯಲ್ಲಿ 1 ಎಕರೆ 30 ಗುಂಟೆ ಜಮೀನು ಭೂಸ್ವಾಧೀನ ಆಗಿದ್ದು, ಉಳಿದ 1 ಎಕರೆ 30 ಗುಂಟೆ ನನ್ನ ಹೆಂಡತಿಯ ಹೆಸರಿನಲ್ಲಿ ಪಹಣಿ ಇರುತ್ತದೆ ಎಂದರೆ ಸರಿ . ಸದರಿ ಆಸ್ತಿ ನನ್ನ ತಂದೆಗೆ ದರ್ಖಾಸ್ತು ಮೂಲಕ ಮಂಜೂರಾಗಿದ್ದು, ನನ್ನ ಹೆಂಡತಿಯ ಹೆಸರಿಗೆ ಖಾತೆ ಮಾಡಿಸಿರುತ್ತಾರೆ. ಸದರಿ 1 ಎಕರೆ 30 ಗುಂಟೆ ತಾರಕ ನಾಲೆಗೆ ಭೂಸ್ವಾಧೀನ ಆಗಿರುತ್ತದೆ.

ಸ.ನಂ.26 ರಲ್ಲಿ 3 ಎಕರೆ 19 ಗುಂಟೆ ಇದ್ದು 2 ಎಕರೆ ಜಮೀನು ಭೂಸ್ವಾಧೀನ ಆಗಿ 1 ಎಕರೆ 19 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಇರುತ್ತದೆ. ನನ್ನ ಹೆಂಡತಿಯ ಹೆಸರಿನಲ್ಲಿದ್ದ 1 ಎಕರೆ 10 ಗುಂಟೆ ಮತ್ತು ನನ್ನ ಹೆಸರಿನಲ್ಲಿದ್ದ 2 ಎಕರೆ ಒಟ್ಟು 3 ಎಕರೆ 10 ಗುಂಟೆ ಭೂಸ್ವಾಧೀನ ಆಗಿರುತ್ತದೆ. ಒಟ್ಟು 8 ಎಕರೆ 39 ಗುಂಟೆ ನಮ್ಮ ಕುಟುಂಬಕ್ಕೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸ.ನಂ.26 ರಲ್ಲಿ 3 ಎಕರೆ 19 ಗುಂಟೆ ಕ್ರಯಕ್ಕೆ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ.

ನಾವು ಸ್ವಾಧೀನ ಇರುವ ಜಮೀನು ಮತ್ತು ನಾಲೆಗೆ ಹೋಗಿರುವ ಜಮೀನನ್ನು ಅಳತೆ ಮಾಡಿದರೆ ಒಟ್ಟು 8 ಎಕರೆ 39 ಗುಂಟೆ ಜಮೀನು ಬರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನನ್ನ ಹೆಂಡತಿಯ ಹೆಸರಿನಲ್ಲಿದ್ದ ಜಮೀನು ತಾರಕ ನಾಲೆಗೆ ಭೂಸ್ವಾಧೀನ ಆಗಿಲ್ಲ ಎಂದರೆ ಸರಿಯಲ್ಲ. ಸ.ನಂ.26/1 ರಲ್ಲಿ 30 ಗುಂಟೆ ಜಮೀನು ಮಾತ್ರ ಭೂಸ್ವಾಧೀನ ಆಗಿದೆ ಎಂದರೆ ಇನ್ನೂ ಜಾಸ್ತಿ ಆಗಿದೆ ಎಂದು ನುಡಿಯುತ್ತಾರೆ.

ನನ್ನ ತಂದೆಗೆ ನಾನು ಒಬ್ಬನೇ ಮಗ ಎಂದರೆ ಸರಿ. ಕೇವಲ 30 ಗುಂಟೆ ಮಾತ್ರ ಭೂಸ್ವಾಧೀನ ಆಗಿದ್ದು, 3 ಎಕರೆ 10 ಗುಂಟೆ ಭೂಸ್ವಾಧೀನ ಆಗಿರುತ್ತದೆ ಎಂದು ಹೇಳಿ ಭೂಸ್ವಾಧೀನ ಆಗಿರುವ ಜಮೀನನ್ನು 2 ಎಕರೆ 20 ಗುಂಟೆ ಎಂದು ಮಂಜೂರು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ಕಾರದಿಂದ ಸಹಾಯಧನ ಪಡೆದು ಸ.ನಂ.19 ರಲ್ಲಿ ಕೃಷಿ ಹೊಂಡ ಮಾಡಿಸಿರುತ್ತೇನೆ. ನಾನು ಸರ್ಕಾರದ ಜಮೀನಿನಲ್ಲಿ ಕೃಷಿ ಹೊಂಡ ಮಾಡಿದ್ದು , ಸ.ನಂ.19 ರಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳು 27 ಗುಂಟೆ ಜಮೀನಿಗೆ ಸಾಗುವಳಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಮುಂದುವರಿದು ನಾನು ತಕರಾರು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಜಮೀನು ಅಳತೆ ಆಗಿದ್ದು, ಮಂಜೂರಾಗುವ ಹಂತದಲ್ಲಿದ್ದು ನಾನು ವಕೀಲರ ಮೂಲಕ ತಕರಾರು ಸಲ್ಲಿಸಿರುತ್ತೇನೆ ಎಂದರೆ 2017 ರಲ್ಲಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

ದಾವೆ ಸಲ್ಲಿಸಿರುವ ಜಮೀನಿನಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿಕೊಂಡಿಲ್ಲ. ಮುಂದುವರಿದು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ 28 ಗುಂಟೆ ಒತ್ತುವರಿ ಆಗಿದೆ ಎಂದು ಅಳತೆ ಮಾಡಿಸಿ ದಾಖಲೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಇಲ್ಲಾ ಎಂದು ನುಡಿಯುತ್ತಾರೆ.

ಪ್ರತಿವಾದಿಗಳು ನಾನು ಸ್ವಾಧೀನ ಇರುವ ದಾವಾ ಸ್ವತ್ತಿನಲ್ಲಿ ಒತ್ತುವರಿ ಮಾಡಿಕೊಂಡಿರುವುದಿಲ್ಲ, ಪ್ರತಿವಾದಿಗಳು ಸ್ವಾಧೀನದಲ್ಲಿರುವ ಜಮೀನಿಗೆ ಸಾಗುವಳಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. 2017 ರಲ್ಲಿ 2 ಎಕರೆ 20 ಗುಂಟೆ ಮಂಜೂರಾದ ನಂತರ ಒತ್ತುವರಿ ಮಾಡಿರುತ್ತಾರಾ ಎಂದರೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

**ಮುಂದುವರಿದ ಪಾಟೀ ಸವಾಲಿಗೆ ಸಮಯವಾಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**